**2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ 684-2013                ಸಿ. ಡಬ್ಲ್ಯುಃ 07**

**ಪಿ. ಡಬ್ಲ್ಯುಃ 06**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ  ಹೆಸರು<br>ವಯಸ್ಸು<br>ಕೆಲಸ<br>ವಾಸ | ತಾಜ್‌ಉನ್ನಿಸಾ<br>ಅಬ್ದುಲ್ ರೆಹಮಾನ್ ಷರೀಫ್<br>58 ವರ್ಷ<br>ಗೃಹಿಣಿ<br>ನೀಲಕಂಠನಗರ, ನಂಜನಗೂಡು. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 08-01-2025 |

**<u>ಮುಖ್ಯ ವಿಚಾರಣೆಃ  ಶ್ರೀ. ಎಪಿಪಿ   ವಕೀಲರಿಂದಃ</u>**

ನನಗೆ ಚಾಸಾ-1 ರಿಂದ 4 ರವರ ಪರಿಚಯ ಇರುತ್ತದೆ ನನಗೆ ಗೊತ್ತು. ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ಮತ್ತು 1 ನೇ ಆರೋಪಿ ನಡುವ ಸಣ್ಣ-ಪುಟ್ಟ ವಿಚಾರಕ್ಕೆ ಜಗಳವಾಗಿದ್ದು ಆ ಬಗ್ಗೆ ನಾನು ಇಬ್ಬರಿಗೂ ಬುದ್ಧಿಮಾತು ಹೇಳಿರುತ್ತೇನೆ ಅಷ್ಟು ಹೊರತುಪಡಿಸಿ ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿಲ್ಲ. ಈ ಪ್ರಕರಣದ ವಿಧ್ಯಮಾನ ಗೊತ್ತಿಲ್ಲ

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಶ್ರೀ. ಎಪಿಪಿ ಯವರಿಂದ**

ಇಕ್ಬಲ್ ಪಾಷ ರವರ ಮೊದಲನೆ ಹೆಂಡತಿ ಮಗ 1 ನೇ ಆರೋಪಿಗೆ ರವರಿಗೆ ಈಗ್ಗೆ ಒಂದು ವರ್ಷದ ಹಿಂದೆ ನಂಜನಗೂಡಿನ ಮುಸ್ಲಿಂ ಬ್ಲಾಕ್ ನ ಸನವುಲ್ಲಾ ರವರುಗಳು ಅಪ್ಸರಿ ರವರೊಂದಿಗೆ ಮದುವೆಯಾಗಿದ್ದು, ಮದುವೆ ನಂಜನಗೂಡು ಚಾಮಲಾಪುರ ಬೀದಿಯ ಮಸೀದಿಯಲ್ಲಿ ಮತ್ತು ಆರ್.ಪಿ ರಸ್ತೆಯ ಗುರುಭವನದಲ್ಲಿ ಊಟದ ವ್ಯವಸ್ಥೆ ಏರ್ಪಾಡು ಆಗಿತ್ತು ಎಂದರೆ ಸರಿ. ಮದುವೆಯಾದ ನಂತರ ಚಾಸಾ–1 ರವರನ್ನು ಅವರ ತಂದೆ–ತಾಯಿ 1 ನೇ ಆರೋಪಿ ಮನೆಗೆ ಕಳುಹಿಸಿದ್ದು ಮದುವೆಯಾದ ಕೆಲವು ದಿನಗಳು ಮಾತ್ರ ಚಾಸಾ–1 ರವರನ್ನು 1 ನೇ ಆರೋಪಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದು, ನಂತರ ದಿನಗಳಲ್ಲಿ 1 ಮತ್ತು 2 ನೇ ಆರೋಪಿ ಚಾಸಾ–1 ರವರಿಗೆ ಸರಿಯಾಗಿ ಊಟ ಬಗ್ಗೆ ಕೊಡದೆ ಸಣ್ಣ–ಪುಟ್ಟ ವಿಚಾರಗಳನ್ನು ನೆಪ ಮಾಡಿಕೊಂಡು ಆಕೆಗೆ ವಿನಾಕಾರಣ ಬೈದು ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ–1 ರವರಿಗೆ ಅವರ ತವರು

ಮನೆಯಿಂದ ಒಂದು ಕಾರು ತೆಗೆಸಿಕೊಂಡು ಬಾ ಇಲ್ಲದಿದ್ದರೆ ರೂ.50,000/- ಹಣ ತೆಗೆದುಕೊಂಡು ಬಾ ಎಂದು, ಆ ಹಣದಲ್ಲಿ ಒಂದು ಸೆಕೆಂಡ್ ಹ್ಯಾಂಡಲ್ ಕಾರ್ ತೆಗೆದುಕೊಳ್ಳುತ್ತೇವೆ ಎಂದು ಇಲ್ಲದಿದ್ದರೆ ತಮ್ಮ ಮನೆ ಬಿಟ್ಟು ಹೋಗು ಎಂದು ಹೇಳಿ ಮನೆಯಿಂದ ಹೊರಗೆ ಹೋಗುವಂತೆ ಹೇಳುತ್ತಿದ್ದಾರೆ ಎಂದು ಈ ವಿಚಾರವನ್ನು ಚಾಸಾ-1 ರವರು ನನ್ನೊಂದಿಗೆ ಹೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ-1 ರವರ ತಂದೆ-ತಾಯಿಗಳಿಗೆ ಕೇಳಿದಾಗ ಅವರು ಸಾಲ-ಸೋಲ ಮಾಡಿ ಈಗತಾನೇ ಮದುವೆ ಮಾಡಿದ್ದೇವೆ ತಮ್ಮ ಬಳಿ ಹಣ ಇಲ್ಲ ಎಂದು ಹೇಳುತ್ತಿದ್ದಾರೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಈಗ ಬಗ್ಗೆ ಚಾಸಾ-1 ರವರ ತಂದೆ-ತಾಯಿ ಮತ್ತು ಚಾಸಾ-9 ಮತ್ತು 11 ರವರುಗಳು ಸಹ ನಮ್ಮ ಭಾವನ ಮನೆಗೆ ಬಂದು ನ್ಯಾಯ ಪಂಚಾಯ್ತಿ ಮಾಡಿ ಚಾಸಾ-1 ರವರಿಗೆ ಯಾವುದೇ ತೊಂದರೆ ಕೊಡಬೇಡಿ ಎಂದು ಹೇಳಿ ಹೋಗಿದ್ದರು ಇದಾದ ನಂತರವು ಸಹ ಆರೋಪಿಗಳು ಕಿರುಕುಳ ಕೊಡುತ್ತಿದ್ದುದ್ದರಿಂದ ಮತ್ತು ಸರಿಯಾಗಿ ಊಟ ಸಹ ಕೊಡದೇ ಇದ್ದಾಗ ಚಾಸಾ-1 ರವರಿಗೆ ನಾನೇ ಕೆಲವು ದಿನ ನಮ್ಮ ಮನೆಯಿಂದ ಊಟ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಇದಾದ ನಂತರ ಮಹಿಳಾ

ಸಂಘದವರು ಸಹ ನ್ಯಾಯ ಪಂಚಾಯ್ತಿ ಮಾಡಿದ್ದು ಗಂಡ–ಹೆಂಡತಿಗೆ ಬೇರೆ ಇದ್ದುಕೊಳ್ಳುವಂತೆ ತಿಳಿಸಿದರು ಎಂದರೆ ಸರಿಯಲ್ಲ. ಚಾಸಾ–1 ರವರು ಮುಸ್ಲಿಂ ಬ್ಲಾಕ್ ನ ಅವರ ತಂದೆಯ ಮತ್ತೊಂದು ಮನೆಯ ಪ್ರತ್ಯೇಕವಾಗಿ ಈಗ್ಗೆ 3 ತಿಂಗಳಿಂದ ವಾಸವಾಗಿದ್ದು ಆಗಲೂ ಸಹ 1 ನೇ ಆರೋಪಿ ರವರು ಚಾಸಾ–1 ರವರಿಗೆ ಊಟ ಬಟ್ಟೆ ಕೊಡದೆ ಬೈದು ಕಿರುಕುಗಳ ಕೊಡತ್ತಿದ್ದ ವಿಚಾರ ಹಾಗೂ 1 ನೇ ಅರೋಪಿ ಚಾಸಾ–1 ಹಾಗೂ ಅವರ ಮನೆಯವರಿಗೆ ಮತ್ತು ನಮಗೆ ಯಾರಿಗೂ ತಿಳಿಯದಂತೆ ಮೈಸೂರಿನಲ್ಲಿ ಬೇರೊಬ್ಬಳನ್ನು ಮದುವೆಯಾಗಿದ್ದರು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ಚಾಸಾ–1 ಮತ್ತು ಅವರ ಮನೆಯವರು ಕೇಳಿದ್ದಕ್ಕೆ ಆರೋಪಿಗಳು ಚಾಸಾ–1 ರವರಿಗೆ ಬೈದು ಗಲಾಟೆ ಮಾಡಿ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುವ ಬಗ್ಗೆ ಚಾಸಾ–1 ರವರು ದೂರು ನೀಡಿರುವ ವಿಚಾರ ಕೆಲವು ದಿನಗಳ ನಂತರ ನನಗೆ ತಿಳಿಯಿತು ಎಂದರೆ ಸರಿಯಲ್ಲ.

2. ದಿ.06–07–2011 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ಇಕ್ಬಾಲ್ ಪಾಷ ರವರು ಮೊದಲ ಹೆಂಡತಿ ಮಗ__________ಮತ್ತೆ

ನೋಡಿದರೆ ಗುರುತಿಸುತ್ತೇನೆ ಎಂದು ಮೇಲೆ ಓದಿ ಹೇಳಲಾದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗೆಳೆದ ಹೇಳಿಕೆ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಸಹ ಆರೋಪಿತರು ನನ್ನ ಸಂಬಂಧಿಕರು ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**